ಹಾಸನ	353
ಚಿಕ್ಕಮಗಳೂರು	330
ಮಂಗಳೂರು	526
ದಾವಣಗೆರೆ	337
ಒಟ್ಟು	**4083**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ವಿಭಾಗ	ಅನುಸೂಚಿಗಳ ಸಂಖ್ಯೆ
ಬೆಂಗಳೂರು	3440

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ವಿಭಾಗ	ಅನುಸೂಚಿಗಳ ಸಂಖ್ಯೆ
ಬೆಳಗಾವಿ	500
ಚಿಕ್ಕೋಡಿ	382
ಹುಬ್ಬಳ್ಳಿ	560
ವಿಜಾಪುರ	470
ಉತ್ತರಕನ್ನಡ	462
ಬಾಗಲಕೋಟೆ	430
ಗದಗ	384
ಹಾವೇರಿ	278
ಒಟ್ಟು	**3466**

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ವಿಭಾಗ	ಅನುಸೂಚಿಗಳ ಸಂಖ್ಯೆ
ಗುಲ್ಬರ್ಗಾ	397
ಯಾದಗಿರ್	225
ಕೊಪ್ಪಳ	242
ರಾಯಚೂರ	395
ಬೀದರ್	389
ಬಳ್ಳಾರಿ	559
ಒಟ್ಟು	**2207**

597(461) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ ನಿರ್ಮಾಣಗೊಂಡ ರಸ್ತೆಗಳಾವುವು ಮತ್ತು ಅವುಗಳ ಉದ್ದ ಎಷ್ಟು;

ಆ) ಇದಕ್ಕಾಗಿ ಮಾಡಲಾದ ಒಟ್ಟು ವೆಚ್ಚ ಎಷ್ಟು;

ಇ) ನಿರ್ಮಾಣಗೊಳ್ಳುತ್ತಿರುವ ರಸ್ತೆಗಳಾವುವು;

ಈ) ಅವುಗಳು ಯಾವ ಹಂತದಲ್ಲಿವೆ (ವಿವರಗಳನ್ನು ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೆಳಕಂಡ ರಸ್ತೆಗಳ ನಿರ್ಮಾಣವನ್ನು ಮಾಡಲಾಗಿದೆ.

ರಸ್ತೆಯ ಹೆಸರು	ತೆಗೆದುಕೊಂಡ ಉದ್ದ (ಕಿ.ಮೀ.ಗಳಲ್ಲಿ)
1. ಗುಲ್ಬರ್ಗಾ ನಗರಕ್ಕೆ ವರ್ತುಲ ರಸ್ತೆ (1ನೇ ಹಂತ)	9.90
2. ಮಂಡ್ಯ ಪಟ್ಟಣದಲ್ಲಿ ಹಳೆ ಮದ್ರಾಸ್–ಕಣ್ಣಾನೂರು ರಸ್ತೆ	7.00
3. ವಾಗ್ದಾರಿ–ರಿಬ್ಬನಪಲ್ಲಿ ರಸ್ತೆ	6.00
4. ಸದಲಗಾ ದತ್ತವಾಡ ರಸ್ತೆಯಲ್ಲಿನ ಸೇತುವೆಗೆ ಕೂಡು ರಸ್ತೆ ನಿರ್ಮಾಣ	6.00

ಆ) ಈ ಕಾಮಗಾರಿಗಾಗಿ ಮಾಡಲಾದ ಒಟ್ಟು ವೆಚ್ಚ:

ರಸ್ತೆಯ ಹೆಸರು	ವೆಚ್ಚ (ರೂ. ಕೋಟಿಗಳಲ್ಲಿ)
1. ಗುಲ್ಬರ್ಗಾ ನಗರಕ್ಕೆ ವರ್ತುಲ ರಸ್ತೆ (1ನೇ ಹಂತ)	13.99
2. ಮಂಡ್ಯ ಪಟ್ಟಣದಲ್ಲಿ ಹಳೆ ಮದ್ರಾಸ್–ಕಣ್ಣಾನೂರು ರಸ್ತೆ	4.30
3. ವಾಗ್ದಾರಿ–ರಿಬ್ಬನಪಲ್ಲಿ ರಸ್ತೆ	2.40
4. ಸದಲಗಾ ದತ್ತವಾಡ ರಸ್ತೆಯಲ್ಲಿನ ಸೇತುವೆಗೆ ಕೂಡು ರಸ್ತೆ ನಿರ್ಮಾಣ	0.99

ಇ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ರಸ್ತೆಗಳ ವಿವರಗಳು:

1. ಜೇವರಗಿ–ವಿಜಾಪುರ ರಾಜ್ಯ ಹೆದ್ದಾರಿ – 119.00 ಕಿಮೀ.
2. ಬಿಳಿಕೆರೆ–ಬೇಲೂರು ರಾಜ್ಯ ಹೆದ್ದಾರಿ – 119.00 ಕಿಮೀ.
3. ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ – 111.00 ಕಿಮೀ. ಯನ್ನು ನಾಲ್ಕು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವುದು
4. ಗುಲ್ಬರ್ಗಾ ವರ್ತುಲ ರಸ್ತೆಯ 2ನೇ ಹಂತದ ನಿರ್ಮಾಣ – 4.70 ಕಿಮೀ
5. ವಾಡಿ–ರಾಯಚೂರು ರಸ್ತೆ – 88.00 ಕಿಮೀ.
6. ಗದಗ–ರೋಣ–ಬಾದಾಮಿ ರಸ್ತೆ – 72.40 ಕಿಮೀ
7. ತಮಿಳುನಾಡು–ಆಂಧ್ರಪ್ರದೇಶ ಗಡಿರಸ್ತೆ – 30.00 ಕಿಮೀ

ಈ) ನಿರ್ಮಾಣಗೊಳ್ಳುತ್ತಿರುವ ರಸ್ತೆಯ ಪ್ರಗತಿಯ ವಿವರ ಕೆಳಗಿನಂತಿದೆ

1. ಜೇವರಗಿ–ವಿಜಾಪುರ ರಸ್ತೆಯನ್ನು ನಾಲ್ಕು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಜೇವರಿಗಿಯಿಂದ ಮೊರಟಗಿವರೆಗಿನ ಮೊದಲನೇ ಪ್ಯಾಕೇಜಿನ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ಬಾಕಿ ಮೂರು ಪ್ಯಾಕೇಜಿನ ಕಾರ್ಯಗಳು ಪ್ರಗತಿಯಲ್ಲಿವೆ.

2. ಬಿಳಿಕೆರೆ–ಬೇಲೂರು ರಸ್ತೆಯನ್ನು ನಾಲ್ಕು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಬೇರ್ಯಾದಿಂದ ಹಾಸನದವರೆಗಿನ ಪ್ಯಾಕೇಜ್–2ರ ಕಾರ್ಯ ಮುಕ್ತಾಯದ ಹಂತದಲ್ಲಿದ್ದು, ಬಾಕಿ ಎರಡು ಪ್ಯಾಕೇಜುಗಳಾದ ಬಿಳಿಕೆರೆಯಿಂದ ಬೇರ್ಯಾವರೆಗೆ (ಬಿ.ಬಿ. 1) ಮತ್ತು ಹಾಸನದಿಂದ–ಬೇಲೂರುವರೆಗಿನ (ಬಿ.ಬಿ.3) ಗಳ ಕಾರ್ಯ ಪ್ರಗತಿಯಲ್ಲಿದ್ದು, ಬಿ.ಬಿ. 4 ಪ್ಯಾಕೇಜಿನಲ್ಲಿನ ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಗಳಿಗೆ ಸೇತುವೆಗಳ ನಿರ್ಮಾಣಕ್ಕಾಗಿ ಗುತ್ತಿಗೆ ಕರೆಯಬೇಕಾಗಿದೆ.

3. ಬೆಂಗಳೂರು–ಮೈಸೂರು ನಾಲ್ಕು ಪಥದ ರಸ್ತೆ ಕಾರ್ಯವು ಪ್ರಗತಿಯಲ್ಲಿದೆ.

4. ಗುಲ್ಬರ್ಗಾ ವರ್ತುಲ ರಸ್ತೆಯ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

5. ವಾಡಿ–ರಾಯಚೂರು ರಸ್ತೆಯ ಕಾರ್ಯವು ಪ್ರಗತಿಯಲ್ಲಿದೆ

6. ಗದಗ–ರೋಣ ಬಾದಾಮಿ ರಸ್ತೆಯ ಕಾರ್ಯವು ಪ್ರಗತಿಯಲ್ಲಿದೆ

7. ತಮಿಳುನಾಡು–ಆಂಧ್ರಪ್ರದೇಶ ಗಡಿ ರಸ್ತೆಯ ಕಾರ್ಯವು ಪ್ರಗತಿಯಲ್ಲಿದೆ.

598(462) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರಾ ನದಿಗೆ ಮುಂಡರಗಿ ತಾಲ್ಲೂಕ ಕೋರ್ಲಹಳ್ಳಿ ಬಳಿ ನಿರ್ಮಿಸಲಾಗಿರುವ ಸೇತುವೆ ಪೂರ್ಣಗೊಂಡಿದ್ದು ಕೋರ್ಲಹಳ್ಳಿ–ಗದಗ ಸಂಪರ್ಕ ರಸ್ತೆ ಕೋರ್ಲಹಳ್ಳಿ–ಹಡಗಲಿ ಸಂಪರ್ಕ ರಸ್ತೆ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮಕೊಳ್ಳುವುದೇ;

ಆ) ಈ ಸೇತುವೆಯ ಪೂರ್ಣ ಪ್ರಯೋಜನವಾಗಲು ಸೊಲ್ಲಾಪುರ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿಗೆ ಸೇತುವೆಯಿಂದ ರಸ್ತೆ ಸಂಪರ್ಕವನ್ನು ಕಲ್ಪಿಸಲು ಕ್ರಮಕೈಗೊಂಡಿದೆಯೇ;

ಇ) ಇಲ್ಲವಾದಲ್ಲಿ ಯಾವಾಗ ಈ ಕಾರ್ಯ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೋರ್ಲಹಳ್ಳಿ ಹಡಗಲಿ ರಸ್ತೆಯು ಅರಭಾವಿ ಚಳ್ಳಕೆರೆ ರಾಜ್ಯ ಹೆದ್ದಾರಿ 45ರ ಭಾಗವಾಗಿದ್ದು 11.20 ಕಿಮೀ ಉದ್ದವಿರುತ್ತದೆ. ಸದರಿ ರಸ್ತೆಯ ಸುಧಾರಣೆ ಕಾಮಗಾರಿಯನ್ನು ಬಳ್ಳಾರಿ ವಿಶೇಷ ಅಭಿವೃದ್ಧಿ ಯೋಜನೆ ಹಂತ–1ರ ಅಡಿಯಲ್ಲಿ ರೂ.42.00 ಲಕ್ಷ ಹಾಗೂ ಹಂತ–3ರಲ್ಲಿ ರೂ.22.00 ಲಕ್ಷಕ್ಕೆ ಕೈಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಕೋರ್ಲಹಳ್ಳಿಯಿಂದ ಗದಗವರೆಗಿನ ಸಂಪರ್ಕ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಸದ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ.

ಆ) ಸರ್ಕಾರಿ ಆದೇಶ ಸಂ: ಲೊಇ–15 ಮಾತಂಕೊ–2003 ಬೆಂಗಳೂರು ದಿನಾಂಕ 18–5–2004ರಲ್ಲಿ ಅರಭಾವಿ–ಚಳ್ಳಕೆರೆ ರಾಜ್ಯ ಹೆದ್ದಾರಿ 45 ಎಂದು (ಗೋಕಾಕ, ನರಗುಂದ, ಶಲವಡಿ, ಶಿರಹಟ್ಟಿ, ಮುಂಡರಗಿ, ಹಡಗಲಿ, ಮೈಲಾರ ಇಟಗಿ, ಉಜ್ಜನಿ, ಜಗಳೂರು ಮೂಲಕ ಚಳ್ಳಕೆರೆ) ಮೇಲ್ದರ್ಜೆಗೇರಿಸಲಾಗಿದೆ. ಈ